ನನ್ನ ಓದು

# ಅಕ್ಷರಸ್ಥರ ಮನೋಧರ್ಮ ತಿದ್ದುವ ಕೃತಿ



## ಓ.ಎಲ್. ನಾಗಭೂಷಣ ಸ್ವಾಮಿ

ಜಗದೀಶ್ ಕೊಪ್ಪ ಅವರು ಅನುವಾದ, ಜೀವನ ಚರಿತ್ರೆ, ಪರಿಸರ ಮತ್ತು ಸಾಹಿತ್ಯ ಚಿಂತನೆಗಳನ್ನು ಕುರಿತು ತಮ್ಮ ಇದುವರೆಗಿನ ಇಪ್ಪತ್ತನಾಲ್ಕು ಕೃತಿಗಳಲ್ಲಿ ಕನ್ನಡ ಓದುಗರ ಸಂವೇದನೆಯನ್ನು ಸೂಕ್ಷ್ಮಗೊಳಿಸುವ, ಸ್ವಸ್ಥ ಸಮಾಜಕ್ಕೆ ಅಗತ್ಯವಾದ, ಆದರೆ ಸುಲಭ ಲಭ್ಯವಲ್ಲದ ಮಾಹಿತಿಯನ್ನು ಓದುಗರಿಗೆ ತಲುಪಿಸುವ ಕೆಲಸದಲ್ಲಿ ತೊಡಗಿದ್ದಾರೆ. 'ಪದಗಳಿವೆ ಎದೆಯೊಳಗೆ' ಕೃತಿ ಅವರ ಮಹತ್ವಾಕಾಂಕ್ಷೆಯ ಬರಹವಾಗಿ ರೂಪುಗೊಂಡಿದೆ.

ಬಹಳಷ್ಟು ಓದುಗರ ಮನೋಧರ್ಮವನ್ನು ತಿದ್ದುವ ಉದ್ದೇಶದ ಬರವಣಿಗೆ ಇದು. ಕಾಲೇಜು ಮಟ್ಟದ ವಿದ್ಯಾಭ್ಯಾಸ ಪಡೆದಿರುವ ಬಹಳಷ್ಟು ಓದುಗರು ಸಮಾಜದ ಸ್ಥೂಲ ವಿವರಗಳನ್ನೂ ತಿಳಿದಿರದ ಪರಿಸ್ಥಿತಿಯಲ್ಲಿರುವುದು ಕಾಣುತ್ತಿದೆ. ನಾವು ಸಾರ್ವಜನಿಕವಾಗಿ ಬಳಸುವ ಭಾಷೆ ಸೂಕ್ಷ್ಮತೆ, ಘನತೆಗಳನ್ನು ಕಳೆದುಕೊಂಡಿದೆ. ಭಾಷೆ ಸೂಕ್ಷ್ಮತೆಯನ್ನು ಕಳೆದುಕೊಳ್ಳುವುದು ಎಂದರೆ ವ್ಯಕ್ತಿ, ಸಮೂಹ ಮತ್ತು ಸಮಾಜವೇ ಸೂಕ್ಷ್ಮತೆಯನ್ನು ಕಳೆದುಕೊಳ್ಳುವುದರ ಕುರುಹು.

'ದೇವದಾಸಿ' ಎಂಬ ಪದದ ಸುತ್ತಲೂ ಬೆಳೆದಿರುವ ಅರ್ಥಪರಿವೇಷ ಇದಕ್ಕೊಂದು ಉದಾಹರಣೆ. ವೇಶ್ಯೆ, ಕರೆವೆಣ್ಣು, ಸೂಳೆ, ದೇವದಾಸಿ, ನಾಯಕಸಾನಿ, ದೊರೆಸಾನಿ, ಇಂಥ ಹಲವು ಪದಗಳೆಲ್ಲ ಒಂದೇ ಅರ್ಥದವು ಎಂಬಂತೆ ಮಾತಾಡುವುದು ತೀರ ಸಾಮಾನ್ಯ ಸಂಗತಿಯಾಗಿದೆ. ದೇವದಾಸಿ ಎಂಬ ಕಲ್ಪನೆಯ ಬಗ್ಗೆಯೇ ಇರುವ ತಿರಸ್ಕಾರ, ಅವಹೇಳನ, ಕೀಳು ನೋಟಗಳು ವ್ಯಾಪಕವಾಗಿವೆ. ದೇವದಾಸಿ ಎಂಬ ವರ್ಗದ ಬಗ್ಗೆ ವಿದೇಶಗಳ, ಭಾರತದ ವಿದ್ವಾಂಸರು, ಸಮಾಜಶಾಸ್ತ್ರಜ್ಞರು ಸಾಕಷ್ಟು ಮಾಹಿತಿಯನ್ನು ಕಲೆ ಹಾಕಿದ್ದಾರೆ. ಆದರೆ, ಅವು ವಿದ್ವತ್ ಲೋಕದ ಆಚೆಗೆ ಇರುವ ದೊಡ್ಡ ಓದುಗ ವರ್ಗಕ್ಕೆ ತಲುಪಿಲ್ಲ. ಜಗದೀಶ್ ಕೊಪ್ಪ ಅನೇಕ ಆಕರಗಳನ್ನು ಅವಲಂಬಿಸಿ, ಹಿರಿಯ ದೇವದಾಸಿಯರ ಸಂದರ್ಶನದಂಥ ಕ್ಷೇತ್ರಕಾರ್ಯದ ಆಧಾರವನ್ನು ಬಳಸಿಕೊಂಡು ಹಲವು ವರ್ಷಗಳ ಕಾಲ ಸಂಗ್ರಹಿಸಿದ ಮಾಹಿತಿ, ಒಳನೋಟಗಳನ್ನು ಒಳಗೊಂಡು ಕನ್ನಡದ ಮತ್ತು ದಕ್ಷಿಣ ಭಾರತದ ದೇವದಾಸಿ ಸಮುದಾಯದ